JSS Mahavidyapeetha, Mysore - 04

**JSS INSTITUTE OF EDUCATION**

(Recognized by the NCTE and Affiliated to University of Mysore, Mysore)

Sakleshpur – 573 134, PB No 26, Hassan Dist.

Email: jssioebedskp@gmail.com website: https://jssioebedskp.org.in Phone No: 97405 91647

# ಜಲ ಸಂರಕ್ಷಣೆ ಕುರಿತು ವಿಶೇಷ ಉಪನ್ಯಾಸ

ದಿನಾಂಕ 17/03/2022 ರಂದು ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ವಿಶ್ವಜಲ ದಿನಾಚರಣೆಯ ಪ್ರಯುಕ್ತ ಜಲ ಸಂರಕ್ಷಣೆ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.







ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ದೀಪಕ್‌ರವರು ಆಗಮಿಸಿ ವಿದ್ಯಾರ್ಥಿಗಳಿಗೆ "Alkaline water"ನ ಪ್ರಾಮುಖ್ಯತೆಯ ಬಗ್ಗೆ ತಿಳಿಸಿಕೊಟ್ಟರು. ಅವರು ಮಾತು ಮುಂದುವರೆಸುತ್ತ ವಿಜ್ಞಾನವು ಮತ್ತು ಪ್ರಕೃತಿಯು ನಮ್ಮನ್ನು ಆವರಿಸಿದೆ ಹಾಗೇಯೆ ಇವುಗಳನ್ನು ಹೊರತುಪಡಿಸಿ ಬದುಕಲು ಸಾಧ್ಯವಿಲ್ಲ. 2012ರಲ್ಲಿ "WHO" ನಾವು ಕುಡಿಯುವ ನೀರಿನ ಮಟ್ಟ **6.5–8.5** ರಷ್ಟು ಇರಬೇಕು ಎಂದು ಘೋಷಿಸಿತು. ಆದ್ದರಿಂದ 2014ರಿಂದ ಟೆಕ್ನಾಲಜಿ ಬಳಸಿಕೊಂಡು "Alkaline water"ನ ಬಳಕೆಗೆ ತಂದಿದ್ದೇವೆ. "Alkaline water" ಎಂದರೆ ಕಾಡಿನಲ್ಲಿ ಸಿಗುವ ಶುದ್ಧ ನೀರು, ಇದರ '$P^{H}$' ಮಟ್ಟ ಹೆಚ್ಚಾಗಿರುತ್ತದೆ ಎಂದು ತಿಳಿಸಿಕೊಟ್ಟರು. ಹಾಗೆಯೇ ಈ ನೀರಿಗೆ ಎಣ್ಣೆಯನ್ನು ಕರಗಿಸುವ ಶಕ್ತಿಯಿರುತ್ತದೆ ಆದರೆ ನಾವು ಇಂದು ಸಿಗುವ ನೀರನ್ನು ಕಲುಷಿತಗೊಳಿಸಿ ಅದರ '$P^{H}$' ಅನ್ನು ಅಸಿಡಿಕ್ ಮಾಡಿ ರೋಗ ನಿರೋಧಕ ಶಕ್ತಿ ಕ್ಷೀಣಿಸುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ನಾವೆಲ್ಲರೂ ನೀರಿನ ಮಾಲೀನ್ಯವನ್ನು ತಡೆಗಟ್ಟುವ ಕಡೆ ನಾವೆಲ್ಲರೂ ಗಮನರಿಸಬೇಕು ಮತ್ತು ನೀರಿನ ಅಭಾವವನ್ನು ತಡೆಗಟ್ಟಲು ಇರುವ ಒಂದೇ ಮಾರ್ಗವೆಂದರೆ ನೀರಿನ ಸಂರಕ್ಷಣೆ. ಲಭ್ಯವಿರುವ ನೀರನ್ನು ಜಾಗರೂಕತೆಯಿಂದ ಮತ್ತು ಮಿತದಿಂದ ಬಳಸಿ ಮುಂದಿನ ಪೀಳಿಗೆಗೆ ಉಳಿಸಬೇಕು ಎಂದು ಬುದ್ಧಿವಾದ ಹೇಳಿದರು. ಹಾಗೆಯೇ ನೀರಿನ ಸಂರಕ್ಷಣೆ ಮಾಡಲು ಉಪಾಯಗಳನ್ನು ತಿಳಿಸಿದರು. ಮೊದಲು ಜೀವ ಸಂಕುಲದ ಅಸ್ತಿತ್ವ ಮತ್ತು ಬೆಳವಣಿಗೆಗೆ ಕಾರಣವಾಗಿರುವ ನೀರನ್ನು ಸಮರ್ಪಕವಾಗಿ ತ್ಯಾಜ್ಯ ವಸ್ತುಗಳು ಕೆರೆ ನದಿಗಳಿಗೆ ಸೇರದಂತೆ ತಡೆಗಟ್ಟಬೇಕು ಮತ್ತು ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು. ಈಗಾಗಲೇ ಕಲುಷಿತಗೊಂಡಿರುವ ನೀರನ್ನು ವಿವಿಧ ವಿಧಾನಗಳಿಂದ ಸಂಸ್ಕರಿಸಿ, ನೀರಿನಲ್ಲಿ ಕ್ಲೋರಿನ್ ಅಂಶಗಳಂತಹ ರೋಗನಿವಾರಕ ರಾಸಾಯನಿಕ ಬೆರೆಸಿ ಶುದ್ಧಿಕರಿಸಿ ನೀರನ್ನು ಪೂರೈಸಬೇಕು. ಇಲ್ಲವಾದರೆ ಮಳೆ ನೀರಿನ ಕೊಯ್ಲು ಮಾಡುವುದರಿಂದ ಅಂದರೆ ನೀರನ್ನು ನೇರವಾಗಿ ಸಂಗ್ರಹಿಸಿ ಬಳಸುವುದು. ಮಳೆ ನೀರನ್ನು ಬಿದ್ದ ಸ್ಥಳದಲ್ಲಿಯೇ ಸಂಗ್ರಹಿಸಬಹುದು ಅಥವಾ ಮಳೆ ಬಿದ್ದು ಹರಿಯುವ ನೀರನ್ನು ಸಂಗ್ರಹಿಸ ಬಹುದು ಎಂಬ ವಿಚಾರವನ್ನು ತಿಳಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರ ಅಧ್ಯಕ್ಷತೆವಹಿಸಿದ್ದರು.

ಕಾರ್ಯಕ್ರಮದಲ್ಲಿ ಅಧ್ಯಾಪಕರು, ಬೋಧಕೇತರ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದರು.

JSS Institute of Education, Sakleshpura, Hassan Dist.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist